www.buntsanghablr.com

# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಜನವರಿ 2024
ಸಂಪುಟ 20 ಸಂಚಿಕೆ 01

ಸಂಚಿಕೆ ಬೆಲೆ ರೂ. 1/–




Radhabai Thimmappa Bhandary Annual Sports Competitions 2023-24





ಬಂಟರ ಸಂಘ ಬೆಂಗಳೂರು
BUNTS' SANGHA BANGALORE

324, Chord Road, Vijayanagara
Bengaluru - 560 040.
Ph: 080 2339 9323/ 2339 9635
E: info@buntsanghablr.com


Prashasthi
Modular Interiors
ಪ್ರಶಸ್ತಿ ಮಾಡ್ಯುಲಾರ್ ಇಂಟೀರ್ಯರ್ಸ್
Ramesh Shetty
Prashasthi Modular Interiors
Total Interior Solution for
Resdential &
Commercial
Service Undertaken as
Interior Decorators
Bringing Interiors to
Life !!
Work Station Wardrobe Living room
Modular Furniture •partitions •Wall Finishing •structural Glazing
Electrical | Air conditioning | Land scaping | Fire Protection | Fabrication
All types of wood works
Factory #3/4 Andrahalli Main Road, Vishwaneedam post, Near Peenya 2 nd stage , Bangalore-91
Mob- 9611648717/94488085444 | Email: prashasthi.modularinteriors@gmail.com www.prashasthiinteriors.com
ತಯಾರಕರು: ಪ್ರಶಸ್ತಿ ಮಾಡ್ಯುಲಾರ್ ಕಿಚನ್ಸ್ ಅಂಡ್ ಫರ್ನಿಚರ್

ADVT.

# ಸ್ನೇಹ ಚಿಂತನೆ


*Monthly Magazine Published by*
**BUNTS' SANGHA BANGALORE**

**VOL 20** **JANUARY 2024** **ISSUE 01**



**ಸಾಹಿತ್ಯ ಮತ್ತು ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
ಶ್ರೀ ಅರವಿಂದ ಶೆಟ್ಟಿ ಎಂ.

**ಸಹ ಸಂಪಾದಕರು :**
ಶ್ರೀ ಸತ್ಯಾನಂದ ಮೇಲಾಂಟ ಎನ್.

**ಸಂಪಾದಕ ಮಂಡಳಿ :**
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀಮತಿ ಜಯಲಕ್ಷ್ಮೀ ಸಿ. ಶೆಟ್ಟಿ
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀಮತಿ ನಿರ್ಮಲಾ ಸಿ. ರೈ
ಡಾ। ಶಾಲ್ಮಲೀ ಸುರೇಶ್
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀಮತಿ ಆರತಿ ಸುರೇಶ್ ಶೆಟ್ಟಿ
ಶ್ರೀಮತಿ ಅನುಷಾ ಶೆಟ್ಟಿ
ಶ್ರೀ ಪ್ರದೀಪ್ ಕುಮಾರ್ ಹೆಗ್ಡೆ
ಶ್ರೀ ಜಯರಾಮ ಶೆಟ್ಟಿ, ನೂಜಾಡಿ
ಶ್ರೀ ಪ್ರಕಾಶ್ ರೈ
ಶ್ರೀ ಪ್ರದೀಪ್‌ರಾಜ್ ಶೆಟ್ಟಿ

**ಪೋಷಕ ಸದಸ್ಯರು :**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ.ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು :**
ಶ್ರೀ ಆನಂದರಾಮ ಶೆಟ್ಟಿ ಬಿ.

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. **– ಸಂಪಾದಕ ಮಂಡಳಿ**


## ಒಳ ಪುಟಗಳಲ್ಲಿ.....


| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಗಳ ವರದಿ | 4 |
| ಮಾನವ ಪ್ರಕೃತಿಯ ಶಿಶುವಾದರೆ ಬಾಳುವೆ, ಇಲ್ಲದಿರೆ ಸೋಲುವೆ | 7–8 |
| ದ್ವಂದ್ವ..... | 9–10 |
| Peace education: a holistic path to harmony | 11–12 |


**ಮುಖ ಪುಟ**

Radhabai Thimmappa Bhandary
Annual Sports Competitions
2023-24

# ಸಂಪಾದಕೀಯ

## ಜೀವನಕ್ಕೊಂದು ತತ್ವ



ಹೊಸವರುಷದ ಹೊಸ್ತಿಲಲ್ಲಿ ನಿಂತಿರುವ ಎಲ್ಲರಿಗೂ ಈ ವರುಷ ಶುಭದಾಯಕವಾಗಿರಲಿ ಎಂಬ ಆಶಯ ನಮ್ಮದು. ಭಾರತೀಯ ಸಂಸ್ಕೃತಿಯಲ್ಲಿ ಹೊಸವರುಷ ಯುಗಾದಿಯಾದರೂ ವ್ಯವಹಾರಿಕವಾಗಿ ನಮಗೆ ಜನವರಿಯೇ ಹೊಸವರುಷ. ಅದರಲ್ಲೂ 2024ರ ಜನವರಿ ತಿಂಗಳು ಭಾರತೀಯ ಹಿಂದೂಗಳಿಗೆ ಒಂದು ಮೈಲಿಗಲ್ಲು. ಯಾಕೆಂದರೆ ಶ್ರೀರಾಮನ ಜನ್ಮಭೂಮಿಯಾದ ಅಯೋಧ್ಯೆಯಲ್ಲಿ ಶ್ರೀರಾಮಮಂದಿರದ ಪ್ರತಿಷ್ಠಾಪನೆ. ಇದು ನಮ್ಮ ಸಂಸ್ಕೃತಿಗೆ ಹಿಡಿದಿರುವ ಕನ್ನಡಿ. ಮುಂದಿನ ಪೀಳಿಗೆಗೆ ಕೊಡುವ ಮಹಾಕೊಡುಗೆ. ಈ ಕೈಂಕರ್ಯ ಭಗವಂತನ ಆಶೀರ್ವಾದದೊಂದಿಗೆ ಫಲಪ್ರದವಾಗಲಿ ಎಂಬ ಆಶಯ ನಮ್ಮೆಲ್ಲರ ಮನದಲ್ಲಿರಲಿ. ಜೊತೆಗೆ ಈ ತಿಂಗಳಲ್ಲಿ ಬರುವ ಸಂಕ್ರಾಂತಿ ಹಬ್ಬ ಜನರಲ್ಲಿ ಸ್ಫೂರ್ತಿ ತುಂಬಿ ಜೀವನದಲ್ಲಿ ಸರ್ವತೋಮುಖ ಔನ್ನತ್ಯವಾಗಲಿ. ಆರೋಗ್ಯವು ಸಮೃದ್ಧಿಯಾಗಲಿ ಎಂಬ ಅಭಿಲಾಷೆ ಜೊತೆಗಿರಲಿ.

ಹೊಸವರುಷದಲ್ಲಿ ಜೀವನಕ್ಕೊಂದು ತತ್ವವನ್ನು ಅಳವಡಿಸಿಕೊಂಡು ಅದಕ್ಕೆ ತಕ್ಕಂತೆ ಬದುಕಿದಾಗ ಜೀವನ ಪರಮ ಪಥದಲ್ಲಿ ನಡೆಯುವುದು.

ಮನುಷ್ಯ ತನ್ನ ಜೀವನದಲ್ಲಿ ಯಶಸ್ಸು ಹೊಂದಬೇಕಾದರೆ ಜೀವನಕ್ಕೊಂದು ತತ್ವವಿರಬೇಕು. ಜೊತೆಗೆ ಸಾಧಿಸುವ ಛಲವಿರಬೇಕು. ಮೊದಲು ನಮ್ಮನ್ನು ನಾವು ಪ್ರೀತಿಸಬೇಕು. ಆತ್ಮವಿಶ್ವಾಸ ಬೆಳೆಸಿಕೊಂಡು ನಮ್ಮಲ್ಲಿರುವ ಪ್ರತಿಭೆಯನ್ನು ನಾವೇ ಗುರುತಿಸಿಕೊಳ್ಳಬೇಕು. ಸಸಿ ಬೆಳೆಯಲು ನೀರೆರೆದು ಗೊಬ್ಬರ ಹಾಕುವಂತೆ ನಮಗೆ ಆಸಕ್ತಿ ಇರುವ ಬೀಜವನ್ನು ಹೆಕ್ಕಿ ತೆಗೆದು ಪೋಷಿಸಬೇಕು. ಬೇರೆಯವರ ಪ್ರೇರಣೆಯಂತೆ ಮೊದಲು ನಮ್ಮಲ್ಲಿ ನಮಗೆ ಪೂರ್ಣ ನಂಬಿಕೆಯಿರಬೇಕು. ಆಗಲೇ ಆತ್ಮಸ್ಥೈರ್ಯ ಹುಟ್ಟುವುದು. ಆಗಲೇ ಸ್ವಂತಿಕೆಯಿಂದ ಬದುಕಲು ಸಾಧ್ಯವಾಗುವುದು.

ಬದುಕು ಮತ್ತು ಬದುಕಲು ಬಿಡು ಎಂಬ ಒಂದು ತತ್ವ ಜೀವನದಲ್ಲಿ ಶಾಂತಿ ನೆಮ್ಮದಿಯನ್ನು ನೀಡುವುದು. ತನ್ನ ಬದುಕು ಎಷ್ಟೇ ಚೆನ್ನಾಗಿದ್ದರೂ ತನ್ನನ್ನು ಪರರೊಂದಿಗೆ ಹೋಲಿಸಿಕೊಂಡು ನೋಡಿದಾಗ ನಮ್ಮಲ್ಲಿ ಆತ್ಮಸ್ಥೈರ್ಯ ಕುಗ್ಗುವುದು. ಪ್ರತಿಕ್ಷಣ ತನಗಾಗಿ ಬದುಕದೆ ಪ್ರಪಂಚದ ಜನರಿಗಾಗಿ, ಪ್ರತಿಷ್ಠೆಗಾಗಿ ಬದುಕಿದಾಗ ತನ್ನ ತನವನ್ನು ಕಳೆದುಕೊಂಡು ಬದುಕಬೇಕಾಗುತ್ತದೆ. ಇದರಿಂದ ಲಾಭ ಮಾತ್ರ ಶೂನ್ಯವಾಗಿರುತ್ತದೆ. ಇದಕ್ಕೆ ಪರಿಹಾರವೆಂದರೆ ಸರಳತೆಯ ಸೂತ್ರ. ಜೀವನದಲ್ಲಿ ಏರಿಳಿತಗಳು ಬಂದಾಗ ಅದಕ್ಕೆ ತಕ್ಕಂತೆ ಬದುಕುತ್ತಾ ನಡೆದಾಗ ಮಾತ್ರ ಎಲ್ಲವನ್ನು ಮೆಟ್ಟಿ ನಿಲ್ಲಲು ಸಾಧ್ಯ, ಜೊತೆಗೆ ಒಂದಿಷ್ಟು ಜೀವನದಲ್ಲಿ ಆದರ್ಶವಿದ್ದರೆ ಅಂಥವರ ಬದುಕು ಎಂದಿಗೂ ಮತ್ತೊಬ್ಬರಿಗೆ ಮಾದರಿಯಾಗಿರುತ್ತದೆ. ನಮ್ಮನ್ನು ನಾವು ಆತ್ಮಾವಲೋಕನ ಮಾಡಿಕೊಂಡು ಬದುಕಿದಾಗ ನಮ್ಮ ತಪ್ಪನ್ನು ನಾವೇ ತಿದ್ದಿಕೊಳ್ಳುವುದು ಸುಲಭವಾಗುತ್ತದೆ.

ಜೀವನಕ್ಕೊಂದು ತತ್ವವನ್ನು ಇಟ್ಟುಕೊಂಡು ಬದುಕಿದಾಗ ನಾವು ಎಷ್ಟು ಕಾಲ ಬದುಕಿದ್ದೆವು ಎನ್ನುವುದಕ್ಕಿಂತ ನಾವು ಹೇಗೆ ಬದುಕಿದ್ದೇವು ಎಂಬುದು ಸಮಾಜಕ್ಕೆ ತಿಳಿಯುತ್ತದೆ. ಒಂದಿಷ್ಟು ಪ್ರೀತಿ, ಮಮತೆಯನ್ನು ಹಂಚಿ ಬದುಕಿದಾಗ ಅದನ್ನೇ ನಾವು ವಾಪಸ್ಸು ಪಡೆಯುತ್ತೇವೆ. ಇದು ಆರೋಗ್ಯಕರ ಬದುಕಿನ ಸೂತ್ರ. ನಮ್ಮ ಸಂತೋಷ ನಮ್ಮೊಳಗೆ ಅಡಗಿದೆ.

ಸಂಘದ ಸರ್ವಸದಸ್ಯರಿಗೆ ಮತ್ತೊಮ್ಮೆ ಹೊಸ ವರ್ಷ 2024ರ ಹಾಗೂ ಮಕರ ಸಂಕ್ರಾಂತಿ ಹಬ್ಬದ ಶುಭಕಾಮನೆಗಳು. ಶ್ರೀ ವರಸಿದ್ಧಿ ವಿನಾಯಕನು ಎಲ್ಲರ ಇಷ್ಟಾರ್ಥಗಳನ್ನು ನೆರವೇರಿಸಲಿ, ಸರ್ವರಿಗೂ ಮಂಗಳವಾಗಲಿ.

**ಅರವಿಂದ ಶೆಟ್ಟಿ ಎಂ.**

# ಅಧ್ಯಕ್ಷರ ಮಾತು



ಕೆಲವೊಮ್ಮೆ ನಾವು ನಮ್ಮ ಸ್ಪರ್ಶದ, ಮುಗುಳ್ನಗೆಯ, ಒಳ್ಳೆಯ ಮಾತುಗಳ ಕೇಳುವ ಕಿವಿ, ಪ್ರಾಮಾಣಿಕವಾದ ಅಭಿನಂದನೀಯ ಮಾತುಗಳು ಅಥವಾ ಕಾಳಜಿಯ ಚಿಕ್ಕ ಪ್ರಕ್ರಿಯೆಗಳನ್ನು ಬಹಳ ಕೇವಲವಾಗಿ ಪರಿಗಣಿಸುತ್ತೇವೆ. ಆದರೆ ಇವೆಲ್ಲವೂ ಒಬ್ಬರ ಜೀವನದ ದಾರಿಯನ್ನೇ ಬದಲಾಯಿಸುವ ಶಕ್ತಿಯನ್ನು ಹೊಂದಿವೆ.

ನಾವು ನಮ್ಮ ಬೆಂಗಳೂರು ಬಂಟರ ಸಂಘದ ವತಿಯಿಂದ ಶಿಕ್ಷಣ, ಆರೋಗ್ಯ ಹಾಗೂ ಇತರ ಸೇವೆಯನ್ನು ಸಮುದಾಯಕ್ಕೆ ಸಲ್ಲಿಸುತ್ತಾ ಸದಸ್ಯರಿಗೆ ಸಾಂಸ್ಕೃತಿಕ, ಕ್ರೀಡೆ ಹಾಗೂ ಇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶಗಳನ್ನು ಕಲ್ಪಿಸುತ್ತಾ, ಹೊಸ ಪೀಳಿಗೆಗೆ ನಮ್ಮ ಶ್ರೀಮಂತ ಬಂಟ ಸಂಸ್ಕೃತಿಯನ್ನು ಹರಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ನಾವೆಲ್ಲರೂ ಒಟ್ಟಾಗಿ ನಮ್ಮ ಹಿರಿಯರು ಹಾಕಿಕೊಟ್ಟ ಸೇವಾ ಪರಂಪರೆಯನ್ನು ಮುಂದುವರಿಸಲು ಹಾಗೂ ಸಮುದಾಯವನ್ನು ಒಗ್ಗೂಡಿಸಲು ಮತ್ತು ಸಹಾಯ ಹಸ್ತ ನೀಡುತ್ತಾ ಸಾಧ್ಯವಾದಷ್ಟು ಜನರನ್ನು ತಲುಪುವ ಪ್ರತಿಜ್ಞೆ ಮಾಡೋಣ.

೨೦೨೩ರ ವರ್ಷಕ್ಕೆ ವಿದಾಯ ಹೇಳುತ್ತಾ ೨೦೨೪ರ ವರ್ಷವನ್ನು ಹೊಸ ಪುಸ್ತಕದ ಹೊಸ ಪುಟ ಎಂದು ಪರಿಗಣಿಸಿ ನಮ್ಮ ಕನಸುಗಳನ್ನು ಮತ್ತು ಸಕಾರಾತ್ಮಕ ಕಾರ್ಯಗಳನ್ನು ಒಳ್ಳೆಯ ಯೋಚನೆಗಳನ್ನು ಚಿತ್ರಿಸೋಣ. ಯಶಸ್ಸಿನ ಹಾದಿಯಲ್ಲಿ ಸಾಗಲು ಹಾಗೂ ಜೀವನದಲ್ಲಿ ಒಳ್ಳೆಯ ವಿಷಯಗಳನ್ನು ಅರಿಯಲು ಇತರರಿಗೆ ಸಹಾಯ ಮಾಡುವ ದೃಢ ನಿರ್ಧಾರಗಳನ್ನು ತೆಗೆದುಕೊಳ್ಳೋಣ.

ಸರ್ವ ಸದಸ್ಯರಿಗೂ ೨೦೨೪ನೇ ವರ್ಷದ ಹಾರ್ದಿಕ ಶುಭಕಾಮನೆಗಳು ಹಾಗೂ ಮಕರ ಸಂಕ್ರಾಂತಿಯ ಶುಭಾಶಯಗಳು.

Too often we underestimate the power of touch, a smile, a kind word, a listening ear, an honest compliment, or the smallest act of caring, all of which have the potential to turn a life around.

We, at Bunts Sangha Bangalore are committed to serve the community by providing assistance for education, health care, provide opportunities for our members to take part in cultural, sports and other activities and spread our rich culture of Bunts to the new generation. Let us all together pledge to continue the legacy of service as laid down by our elders and reach as many people as possible to unite and help the community.

As we bid goodbye to the year 2023, let us look back to our moments of happiness and success, leaving behind memories and hoping to have a fresh start. Consider the year 2024 as a blank canvas, believe in yourself and paint the canvas of the year with dreams and positive affirmations. It's time to make resolutions that help to conquer success and get all the good things in life.

Best wishes to all our esteemed members for the year 2024 and good wishes of Makara Sankranthi.

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

hegdemm@gmail.com

## ಗೌರವ ಕಾರ್ಯದರ್ಶಿಯವರ ವರದಿ

### ಸಂಘದ ಸದಸ್ಯರೆಲ್ಲರಿಗೂ ಮಕರ ಸಂಕ್ರಾಂತಿಯ ಶುಭಾಶಯಗಳು



ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಅಂಗವಾಗಿ ದಿನಾಂಕ 24.12.2023ರಂದು ಅಂಜನಾಪುರದ ಸಿಲಿಕಾನ್ ಅರೈಸ್ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ಶಟಲ್ ಬ್ಯಾಡ್ಮಿಂಟನ್ ಸ್ಪರ್ಧೆಯನ್ನು, ದಿನಾಂಕ 06.01.2024 ಮತ್ತು ದಿನಾಂಕ 07.01.2024ರಂದು ಜಾಲಹಳ್ಳಿ ಹೆಚ್.ಎಂ.ಟಿ. ಮೈದಾನದಲ್ಲಿ ಪುರುಷರ ಮತ್ತು ಮಹಿಳೆಯರ ಕ್ರಿಕೆಟ್ ಪಂದ್ಯಾಟವನ್ನು ಏರ್ಪಡಿಸಲಾಗಿತ್ತು. ಈ ಎಲ್ಲಾ ಸ್ಪರ್ಧೆಗಳಲ್ಲಿ ಸಂಘದ ಸದಸ್ಯರು ಮತ್ತು ಅವರ ಮಕ್ಕಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದಂತಹ ಕ್ರೀಡಾ ಸಮಿತಿಯ ಚೇರ್‌ಪರ್ಸನ್ ಶ್ರೀ ಕಿರಣ್ ಕುಮಾರ್ ಶೆಟ್ಟಿ, ಸಂಚಾಲಕರಾದ ಶ್ರೀ ನಿತ್ಯರಂಜನ್ ಹೆಗ್ಡೆ ಮತ್ತು ತಂಡಕ್ಕೆ ಅಭಿನಂದನೆಗಳು. ಕ್ರೀಡಾ ಕೂಟಕ್ಕೆ ಸಹಕರಿಸಿದ ಎಲ್ಲಾ ದಾನಿಗಳಿಗೂ ಧನ್ಯವಾದಗಳು.

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಅಂಗವಾಗಿ ಸಾಂಸ್ಕೃತಿಕ ಸಮಿತಿಯ ವತಿಯಿಂದ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಈ ಎಲ್ಲಾ ಸ್ಪರ್ಧೆಗಳಲ್ಲಿ ಸಂಘದ ಸದಸ್ಯರು ಮತ್ತು ಅವರ ಮಕ್ಕಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸಾಂಸ್ಕೃತಿಕ ಸ್ಪರ್ಧೆಗಳನ್ನು ಅಚ್ಚುಕಟ್ಟಾಗಿ ಆಯೋಜಿಸಿದಂತಹ ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈ, ಸಂಚಾಲಕರಾದ ಶ್ರೀ ಮಹೇಶ್ ಶೆಟ್ಟಿ ಬೈಲೂರು ಮತ್ತು ತಂಡಕ್ಕೆ ಅಭಿನಂದನೆಗಳು.

ದಿನಾಂಕ 13.01.2024ರಂದು ಸಂಘದ ವಾರ್ಷಿಕ ಮಹಾಸಭೆಯು ಬಂಟರ ಸಂಘದ ಆರ್.ಎನ್.ಎಸ್. ವಿದ್ಯಾನಿಕೇತನ – I ರ ಆವರಣದಲ್ಲಿ ನಡೆಯಲಿದ್ದು ತಾವೆಲ್ಲರೂ ಬಂದು ಭಾಗವಹಿಸಬೇಕಾಗಿ ವಿನಂತಿ.

ದಿನಾಂಕ 19.01.2024 ಶುಕ್ರವಾರದಂದು ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 24ನೇ ವಾರ್ಷಿಕೋತ್ಸವವು ನಡೆಯಲಿದ್ದು, ಭಕ್ತಾದಿಗಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ಅದೇ ದಿನ ಸಂಘದ ಯಕ್ಷಗಾನ ತರಗತಿಯ ಬಾಲ ಕಲಾವಿದರಿಂದ "ದ್ರೌಪದಿ ಪ್ರತಾಪ" ಹಾಗೂ ಸಂಘದ ಯಕ್ಷಗಾನ ತರಗತಿಯ ಮಹಿಳಾ ಸದಸ್ಯೆಯರಿಂದ "ಬ್ರಹ್ಮಕಲಾಪ" ಯಕ್ಷಗಾನವು ನಡೆಯಲಿದ್ದು ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯು ದಿನಾಂಕ 26.01.2024ರಂದು ಸಂಘದ ಆವರಣದಲ್ಲಿ ನಡೆಯಲಿದ್ದು, ಸದಸ್ಯರೆಲ್ಲರೂ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಸಂಘದ ವಿವಾಹ ವೇದಿಕೆಯ ವತಿಯಿಂದ ದಿನಾಂಕ 04.02.2024ರಂದು ಸಂಘದ ಆವರಣದಲ್ಲಿ ವಧೂ–ವರರ ಸಮಾವೇಶ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಸದಸ್ಯರು ಕಾರ್ಯಕ್ರಮದ ಸದುಪಯೋಗ ಪಡೆಯಬೇಕಾಗಿ ವಿನಂತಿ.

ಇಂತಿ ತಮ್ಮ ಪ್ರೀತಿಯ,
**ಬಿ. ಆನಂದರಾಮ ಶೆಟ್ಟಿ**
ಗೌರವ ಕಾರ್ಯದರ್ಶಿ



## ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 24ನೇ ವಾರ್ಷಿಕೋತ್ಸವದ ಕರೆಯೋಲೆ

**ಆಸ್ತಿಕ ಬಂಧುಗಳೇ,**

ಸಂಘದ ಸಂಕೀರ್ಣದಲ್ಲಿರುವ "ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ"ದ 24ನೇ ವಾರ್ಷಿಕೋತ್ಸವವನ್ನು 2024ನೇ ಜನವರಿ, 19ನೇ ತಾರೀಕು ಶುಕ್ರವಾರದಂದು ಅದ್ದೂರಿಯಾಗಿ ವಿಶೇಷ ಪೂಜಾಲಂಕಾರದೊಂದಿಗೆ ನೆರವೇರಿಸಲು ನಿಶ್ಚಯಿಸಿರುತ್ತೇವೆ.

### ಕಾರ್ಯಕ್ರಮಗಳ ವಿವರ

| | |
|---|---|
| ಬೆಳಿಗ್ಗೆ 8.00ಗಂಟೆಗೆ | : ಅಭಿಷೇಕ, ದೇವತಾ ಗಣಹೋಮ ಮತ್ತು ಕಲಾವೃದ್ಧಿ ಹೋಮ |
| ಬೆಳಿಗ್ಗೆ 10.00ಗಂಟೆಗೆ | : ಭಜನಾ ಕಾರ್ಯಕ್ರಮ |
| ಮಧ್ಯಾಹ್ನ 12.00ಗಂಟೆಗೆ | : ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ |
| ಮಧ್ಯಾಹ್ನ 1.00ಗಂಟೆಗೆ | : ಅನ್ನಸಂತರ್ಪಣೆ |
| ಮಧ್ಯಾಹ್ನ 2.30ರಿಂದ | : ಯಕ್ಷಗಾನ ಸಮಿತಿಯ ವತಿಯಿಂದ ಯಕ್ಷಗಾನ |

ಸಂಘದ ಸಂಕೀರ್ಣದಲ್ಲಿ ನಡೆಯುವ ಪೂಜಾ ಕಾರ್ಯಕ್ರಮಕ್ಕೆ ಭಕ್ತಾದಿಗಳಾದ ತಾವು ಕುಟುಂಬ ಸಮೇತರಾಗಿ ಆಗಮಿಸಿ ಶ್ರೀ ಮಹಾಗಣಪತಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತಾ, ತಮಗೆ ಆದರದ ಸ್ವಾಗತವನ್ನು ಕೋರುವ,

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಜಯಕರ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ
ಮೊ.: 9986170124

**ಕೀರ್ತನ್ ಶೆಟ್ಟಿ**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ
ಮೊ.: 9986170124

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಪ್ರಾರ್ಥನಾ ಮಂದಿರದ ಸಮಿತಿ ಸದಸ್ಯರು.**

**ವಿ.ಸೂ: 'ಅಭಿಷೇಕ'** ಮಾಡಿಸುವ ಭಕ್ತಾದಿಗಳು ರೂ. 101/–ನ್ನು, **'ಗಣಹೋಮ'** ಮಾಡಿಸುವವರು ರೂ. 151/–ನ್ನು ಮತ್ತು ಶಾಶ್ವತ ಪೂಜೆ ಮಾಡಿಸುವವರು ರೂ. 1251/– ನ್ನು ಸಂಘದ ಕಛೇರಿಯಲ್ಲಿ ಅಥವಾ ದೇವಸ್ಥಾನದಲ್ಲಿ ಪಾವತಿಸಿ ರಸೀದಿ ಪಡೆಯಬೇಕಾಗಿ ವಿನಂತಿ.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE



# ಬಂಟರ ಸಂಘ ಬೆಂಗಳೂರು
# ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ

**ಶ್ರೀ ವರಸಿದ್ಧಿ ವಿನಾಯಕ ವಾರ್ಷಿಕೋತ್ಸವದ ಪ್ರಯುಕ್ತ ಬಂಟರ ಸಂಘದ ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ಕಲಿಕಾ ಕೇಂದ್ರದಿಂದ ಮಕ್ಕಳ ಮತ್ತು ಮಹಿಳಾ ಯಕ್ಷಗಾನ**

**ದಿನಾಂಕ 19.01.2024, ಶುಕ್ರವಾರ**
**ಸ್ಥಳ: ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನ**

**ಕಾರ್ಯಕ್ರಮಗಳು :**

ಮಧ್ಯಾಹ್ನ 1.00 ಘಂಟೆಗೆ

**"ದ್ರೌಪದಿ ಪ್ರತಾಪ"**

ಸಂಘದ ಯಕ್ಷಗಾನ ತರಗತಿಯ ಬಾಲಕಲಾವಿದರಿಂದ
ತರಬೇತುದಾರರು: ಶ್ರೀ ಸುಬ್ರಾಯ ಹೆಬ್ಬಾರ್ ಬಿ.

ಮಧ್ಯಾಹ್ನ 3.00 ಕ್ಕೆ:

**"ಬ್ರಹ್ಮಕಪಾಲ"**

ಸಂಘದ ಯಕ್ಷಗಾನ ತರಗತಿಯ ಮಹಿಳಾ ಸದಸ್ಯೆಯರಿಂದ
ತರಬೇತುದಾರರು: ಶ್ರೀ ಬೇಗಾರ ಶಿವಕುಮಾರ್

**ಸಂಘದ ಸದಸ್ಯರು ಹಾಗೂ ಕಲಾಭಿಮಾನಿಗಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಸವಿನಯ ವಿನಂತಿ.**

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಹರಿಪ್ರಸಾದ್ ಶೆಟ್ಟಿ**
ಸಂಚಾಲಕರು, ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ

**ರಮೇಶ್ ಜಿ. ಶೆಟ್ಟಿ**
ಚೇರ್‌ಪರ್ಸನ್, ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ ಸದಸ್ಯರು**

# ಮಾನವ ಪ್ರಕೃತಿಯ ಶಿಶುವಾದರೆ ಬಾಳುವೆ, ಇಲ್ಲದಿರೆ ಸೋಲುವೆ



ಪ್ರದೀಪ ಶೆಟ್ಟಿ ಬೇಳೂರು

ಮನುಷ್ಯ ಈ ಭೂಮಂಡಲದಲ್ಲಿನ ಎಲ್ಲ ಜೀವರಾಶಿಗಳಿಗಿಂತ ತುಂಬಾ ಬೌದ್ಧಿಕವಾಗಿ ಬೆಳವಣಿಗೆ ಹೊಂದಿರುವ ಜೀವಿ, ಹಾಗಾಗಿ ಆತ ಎಲ್ಲ ಜೀವಸಂಕುಲಗಳಿಗೂ ಸಮಾನ ಹಕ್ಕಿರುವ ಈ ಪ್ರಕೃತಿಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳುವುದರಲ್ಲಿ ಯಶಸ್ಸು ಕಂಡುಕೊಳ್ಳುತ್ತಿದ್ದಾನೆ. ನಮ್ಮ ಹಿರಿಯರು ಶತಶತಮಾನಗಳಿಂದ ನಾವು ಇಂದು ಬದುಕುತ್ತಿರುವ ಈ ಭೂತಾಯಿಯ ಮಡಿಲಲ್ಲಿ ಹುಟ್ಟಿ, ಬಾಳುವೆ ನಡೆಸಿ, ಮರೆಯಾಗಿ ಹೋಗಿದ್ದಾರೆ. ಆದರೆ ಅವರು ಪ್ರಕೃತಿಯಲ್ಲಿನ ಮರ, ಗಿಡ, ಕಾಡು ಹಾಗೂ ಎಲ್ಲ ಜೀವಿಗಳಿಗೂ ಸ್ವತಂತ್ರವಾಗಿ ಬದುಕಲು ಅವಕಾಶ ಕೊಟ್ಟು ಸ್ವಾಸ್ಥ್ಯ ಕಾಪಾಡಿಕೊಂಡಿದ್ದರು. ಅದೆಲ್ಲದರ ಪರಿಣಾಮವೇ ಇಂದು ಕೂಡ ನಾವು ಇಷ್ಟು ಸುಂದರವಾದ ಮತ್ತು ಆರೋಗ್ಯಯುತವಾದ ಪ್ರಕೃತಿಯಲ್ಲಿ ಜೀವಿಸುತ್ತಿದ್ದೇವೆ. ಆಗಿನ ಕಾಲದವರು ಜೀವನದ ಪ್ರತಿ ಹಂತದಲ್ಲೂ ತಾವು ಮಾಡುವ ಪ್ರತಿ ಕೆಲಸವನ್ನು ಪ್ರಕೃತಿಗೆ ಅರ್ಪಿಸುತ್ತಿದ್ದರು, ಹಾಗಾಗಿ ಅವರಲ್ಲಿ ಪ್ರಕೃತಿ ದೈವ ಸಮಾನವಾದ ಭಾವವಿತ್ತು. ಪ್ರಕೃತಿಯಿಂದ ನಾವು ಹೊರತು ನಮ್ಮಿಂದ ಪ್ರಕೃತಿಯಲ್ಲ ಎನ್ನುವ ಸತ್ಯ ಅಂದಿನವರಿಗೆ ಸರಿಯಾಗಿ ತಿಳಿದಿತ್ತು ಎನ್ನುವುದನ್ನು ನಾವು ಇಲ್ಲಿ ಅರಿಯಬಹುದು.

ಈ ಜಗತ್ತು ಶಾಂತಿ ನೆಮ್ಮದಿಯಿಂದ ಇರಬೇಕು ಎಂದರೆ ಪ್ರಕೃತಿಯ ಸಮತೋಲನ ಅತ್ಯಗತ್ಯ. ಏಕೆಂದರೆ ಕೇವಲ ಮನುಷ್ಯನಿಂದ ಮಾತ್ರ ಈ ಪ್ರಕೃತಿಯ ಉಳಿವು ಸಾಧ್ಯವಿಲ್ಲ, ಇಲ್ಲಿ ಎಲ್ಲ ಜೀವ ಸಂಕುಲಗಳು ತಮ್ಮ ತಮ್ಮ ಪಾತ್ರವನ್ನು ಸಂಪೂರ್ಣವಾಗಿ ನಿರ್ವಹಣೆ ಮಾಡಿದಾಗ ಮಾತ್ರ ಪ್ರಕೃತಿಯ ಸಂವೇದನೆ ಸರಿಯಾಗಿರುತ್ತದೆ. ಆದರೆ ಮನುಷ್ಯರಾದ ನಾವು ಏನು ಮಾಡುತ್ತಿದ್ದೇವೆ? ಆಧುನಿಕತೆಯ ಭರದಲ್ಲಿ ಪ್ರಕೃತಿಯನ್ನು ನಮಗೆ ಬೇಕಾದ ಹಾಗೆ ನಡೆಸಿಕೊಳ್ಳುತ್ತಿಲ್ಲವೇ? ಇಂತಹ ಹಲವಾರು ಪ್ರಶ್ನೆಗಳು ಮೂಡಬೇಕಾದ ಸಮಯವಿದು, ಏಕೆಂದರೆ ಈಗ ಜಾಣ ಕುರುಡು ವಹಿಸಿದರೆ ಮುಂದೊಂದು ದಿನ ಪಶ್ಚಾತ್ತಾಪ ನಮ್ಮದೆ ಮುಂದಿನ ಪೀಳಿಗೆಯವರು ಪಡುವುದರಲ್ಲಿ ಯಾವುದೇ ಸಂದೇಹವಿಲ್ಲ. ಬದುಕು ನಿಂತ ನೀರಾಗಬಾರದು ಹೌದು, ಆದರೆ ನಮ್ಮ ಉನ್ನತಿ ಮತ್ತೊಂದು ಜೀವದ ನಾಶಕ್ಕೂ ಕಾರಣವಾಗಬಾರದಲ್ಲವೇ?. ಈಗಾಗಲೇ ಹಲವಾರು ಬಗೆಯ ಪಕ್ಷಿ ಸಂತತಿಗಳು ಹೇಳ ಹೆಸರಿಲ್ಲದೆ ನಾಶವಾಗಿವೆ. ನಮ್ಮ ಅಭ್ಯುದಯದ ಹೆಸರಿನಲ್ಲಿ ಕಾಡುಗಳು ಕ್ರಮೇಣ ನಾಡುಗಳಾಗಿ ರೂಪುಗೊಳ್ಳುತ್ತಿವೆ, ಅಲ್ಲಿ ಬದುಕುತ್ತಿದ್ದ ಅದೆಷ್ಟೋ ಪ್ರಾಣಿ ಸಂಕುಲಗಳ ಸೂರನ್ನೆ ನಾವು ಕಿತ್ತುಕೊಳ್ಳುತ್ತಿದ್ದೇವೆ. ಆದರೆ ಅದರ ಸುಳಿವು ಕೂಡ ತಿಳಿಯದ ಹಾಗೆ ನಾವು ವರ್ತಿಸುತ್ತಿದ್ದೇವೆ ಮತ್ತು ಅಭಿವೃದ್ಧಿಯ ಸಬೂಬು ನೀಡುತ್ತಿದ್ದೇವೆ.

ಇಂದು ನಾಶ ಮಾಡುತ್ತಿರುವ ಪ್ರಕೃತಿಯ ಪೋಷಣೆಯನ್ನು ಎಂದು ನಾವು ಮಾಡಿದವರಲ್ಲ, ದಶಕಗಳಿಂದ ಹಾಗೂ ಶತಮಾನಗಳಿಂದ ಬೆಳೆದು ನಿಂತಿರುವ ಸಹಸ್ರಾರು ಮರಗಳ ಭಕ್ಷಣೆಯ ಕಾರ್ಯ ಮಾಡುವುದರಲ್ಲಿ ನಾವು ಸಫಲರಾಗುತ್ತಿದ್ದೇವೆ. ನಮ್ಮ ಆಧುನಿಕತೆಗೆ ತಕ್ಕಂತೆ ಮನೆ ಮತ್ತು ನಗರಗಳ ನಿರ್ಮಾಣಕ್ಕೆ ಪ್ರಕೃತಿಯನ್ನು ನೋಯಿಸುತ್ತಿರುವ ನಾವು ಅದರ ಸಮತೋಲನ ಕಾಪಾಡಿಕೊಳ್ಳಲು ಬೇಕಾದ ಕಾರ್ಯವನ್ನು ಯಾವ ರೀತಿ ಮಾಡುತ್ತಿದ್ದೇವೆ ಕೇಳಿದರೆ ನಮ್ಮಲ್ಲಿ ಉತ್ತರ ಸಿಗುವುದು ಬಹುಶಃ ಅಸಾಧ್ಯ. ಏಕೆಂದರೆ ವರ್ತಮಾನದ ಪೀಳಿಗೆಯವರಾದ ನಾವು ಓದು, ಉದ್ಯೋಗ, ಹಣ, ಆಸ್ತಿ ಹಾಗೂ ಜನಪ್ರಿಯತೆಯ ಹಿಂದೆ ಓಡುತ್ತಿದ್ದೇವೆ ಹೊರತು ಪ್ರಕೃತಿಯ ಅಳಿವು, ಉಳಿವಿನ ಬಗೆಗೆ ಯೋಚಿಸುವಷ್ಟು ಸಮಯವು ಇಲ್ಲ, ಹಾಗೆ ಆಸಕ್ತಿಯೂ ಇಲ್ಲ.

ಜಾಗತಿಕ ತಾಪಮಾನ ವರುಷದಿಂದ ಏರುತ್ತಿದೆ, ಮಳೆ, ಚಳಿ ಋತುಗಳು ಕಾಲಕ್ಕೆ ಸರಿಯಾಗಿ ಬರುತ್ತಿಲ್ಲ ಮತ್ತು ಬಂದರೂ ಸಮತೋಲನ ಕಾಯ್ದುಕೊಳ್ಳುತ್ತಿಲ್ಲ. ಬಿಸಿಲು ಎಲ್ಲ ಋತುಗಳಲ್ಲಿ ಒಂದೇ ಸಮನೆ ಭೂಮಿಯನ್ನು ಮತ್ತು ಎಲ್ಲಾ ಜೀವಿಗಳನ್ನು ಸುಡುತ್ತಿದೆ. ಅಂತರ್ಜಲ ದಿನೇ ದಿನೇ ಕುಸಿಯುತ್ತಿದೆ, ವಾಯುಮಾಲಿನ್ಯದ ಕಾರಣದಿಂದ ಶುದ್ಧ ಗಾಳಿಯ ಕೊರತೆ ದೊಡ್ಡ ದೊಡ್ಡ ನಗರಗಳಲ್ಲಿ ಈಗಾಗಲೇ ಕಾಣಸಿಗುತ್ತಿದೆ. ಭೂಕಂಪ ಹಾಗೂ ಪ್ರವಾಹಗಳು ನಮ್ಮ ಹಿಡಿತಕ್ಕೆ ಸಿಗದಂತೆ ಸಂಭವಿಸುತ್ತಿವೆ. ಇವೆಲ್ಲದರ ನಡುವೆ

ಮನುಷ್ಯನೆ ಆತನ ಮೇಲೆ ಅತಿಯಾದ ಒತ್ತಡ ಹೇರಿಕೊಂಡು ಬದುಕನ್ನು ಇನ್ನಷ್ಟು ಜಟಿಲಗೊಳಿಸಿಕೊಳ್ಳುತ್ತಿದ್ದಾನೆ.

ಭೌತಿಕ ಉನ್ನತಿಯ ಸೋಗಿನಲ್ಲಿ ನೆಮ್ಮದಿ ದಿನ ಕಳೆದಂತೆ ಕುಸಿತಗೊಳ್ಳುತ್ತಿದೆ. ಪ್ರಕೃತಿ ಮತ್ತು ಮನುಷ್ಯನ ನಡುವಿನ ಸಂಬಂಧಕ್ಕೆ ಅರ್ಥ ಇಲ್ಲದಂತಾಗಿದೆ. ಒಂದು ಕಾಲದಲ್ಲಿ ಪ್ರಕೃತಿ ದೇವರೆನ್ನುತ್ತಿದ್ದ ನಾವುಗಳೇ, ಇಂದು ಪ್ರಕೃತಿಯ ಸಂಪತ್ತನ್ನು ನಮ್ಮ ಹಿತಕ್ಕೆ ದೋಚುತ್ತಿದ್ದೇವೆ, ಮತ್ತು ಮುಂದಿನ ಜನಾಂಗಕ್ಕೆ ದ್ರೋಹ ಎಸಗುತ್ತಿದ್ದೇವೆ ಎಂದರೂ ತಪ್ಪಾಗುವುದಿಲ್ಲ. ಇರುವ ಪ್ರಕೃತಿಯ ಸ್ವತ್ತನ್ನು ಅನುಭವಿಸುವುದರ ಜೊತೆ ಜೊತೆಗೆ ಅದರ ಬೆಳವಣಿಗೆಗೆ ಬೇಕಾದ ಕಾರ್ಯವನ್ನು ಮಾಡುವಲ್ಲಿ ನಾವು ನಿರತರಾಗೋಣ. ಹಾಗಾದಾಗ ಮಾತ್ರ ಪ್ರಕೃತಿ ಮಾತೆ ತುಸು ಸಂತಸದಿಂದ ಇರಬಹುದು ಇಲ್ಲವಾದಲ್ಲಿ ಮುಂದೊಂದು ದಿನ ಅವಳ ರೌದ್ರಾವತಾರಕ್ಕೆ ಸಾಕ್ಷಿಯಾಗುವ ಕಾಲ ದೂರವೇನಿಲ್ಲ.

ಪ್ರಕೃತಿಯನ್ನು ಪೂಜಿಸದೆ ಹೋದರೂ ತೊಂದರೆಯಿಲ್ಲ, ನಶಿಸುವುದರಲ್ಲಿ ನಾವು ತೊಡಗದಿರೋಣ ಎನ್ನುವುದೇ ಈ ಲೇಖನದ ಆಶಯ.


## *ದಿನಾಂಕ ಬದಲಾವಣೆ*

## *ಶ್ರೀನಿವಾಸ ಸೂಡರ ಎಪ್ಪತ್ತರ ಸಂಭ್ರಮ*

**ಆತ್ಮೀಯ ಬಂಧುಗಳೇ,**



ಮಲೆನಾಡಿನ ಒಂದು ಸಣ್ಣ ಹಳ್ಳಿಯಿಂದ ಮಹಾನಗರ ಬೆಂಗಳೂರಿಗೆ ಬಂದು ತಮ್ಮ ಸ್ವಂತ ಪರಿಶ್ರಮದಿಂದ ಯಶಸ್ಸಿನ ಉತ್ತುಂಗಕ್ಕೇರಿ ಅದೆಷ್ಟೋ ಜನರಿಗೆ ಆಶ್ರಯದಾತರಾಗಿ, ಅನ್ನದಾತರಾಗಿ, ಮಾರ್ಗದರ್ಶಕರಾಗಿ ತುಂಬು ಜೀವನವನ್ನು ನಡೆಸಿ 70 ರ ವಸಂತಕ್ಕೆ ಕಾಲಿಡುತ್ತಿರುವ ನಮ್ಮ ನಿಮ್ಮೆಲ್ಲರ ನೆಚ್ಚಿನ ಶ್ರೀ. ಹೆಚ್. ವಿ. ಶ್ರೀನಿವಾಸ ಸೂಡರ *ಎಪ್ಪತರ ಸಂಭ್ರಮ-ಗುರು ವಂದನಾ* ಕಾರ್ಯಕ್ರಮವನ್ನು ಅವರ ಶಿಷ್ಯರು ಆಯೋಜಿಸಿದ್ದು, ಶ್ರೀಯುತರಿಗೆ ಅಭಿಮಾನ ಪೂರ್ವಕವಾಗಿ ಅಭಿನಂದಿಸುವ ಕೃತಜ್ಞತಾ ಕಾರ್ಯಕ್ರಮದ ಜೊತೆಗೆ, ಶ್ರೀಯುತರ ಕುರಿತಾದ ತಮ್ಮ ಅಭಿಪ್ರಾಯ-ಗೌರವದ ದ್ಯೋತಕವಾಗಿ ಅಕ್ಷರರೂಪ ಕೊಟ್ಟು ಪುಸ್ತಕವಾಗಿ ಹೊರ ತರುವ ಅಭಿನಂದನಾ ಗ್ರಂಥವನ್ನು ಬಿಡುಗಡೆಗೊಳಿಸುವ ಈ ಸಂಭ್ರಮಕ್ಕೆ ನೀವು ನಾವೆಲ್ಲರೂ ಜೊತೆಗೂಡೋಣ ಎನ್ನುವ ಸದುದ್ದೇಶ ನಮ್ಮದು.........

ದಿನಾಂಕ 07-01-2024 ರ ಭಾನುವಾರ ನಡೆಯಬೇಕಿದ್ದ ಈ ಕಾರ್ಯಕ್ರಮವು ದಿನಾಂಕ 27-01-2024ರ ಶನಿವಾರ ಸಮಯ 3-30 ರಿಂದ ಮಹಾಲಕ್ಷ್ಮಿಪುರಂನ ಡಾ. ರಾಜಕುಮಾರ್ ಒಳಾಂಗಣ ಕ್ರೀಡಾಂಗಣದಲ್ಲಿ ಅಭಿನಂದನಾ ಸಮಿತಿಯ ಗೌರವಾಧ್ಯಕ್ಷರಾದ ಶ್ರೀ.ಹೆಚ್. ಎಸ್. ರಾಘವೇಂದ್ರ ಶೆಟ್ಟರ ನೇತೃತ್ವದಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಎಲ್ಲಾ ಬಂಧು ಮಿತ್ರರಿಗೆ ಆತ್ಮೀಯ ಸ್ವಾಗತ...

ಶ್ರೀನಿವಾಸ ಸೂಡರ ಅಭಿಮಾನಿ ಬಳಗ
ಬೆಂಗಳೂರು.

ಪ್ರೀತಿಯಿಂದ.....



**ಹೆಚ್. ಎಸ್. ರಾಘವೇಂದ್ರ ಶೆಟ್ಟಿ**
ಗೌರವಾಧ್ಯಕ್ಷರು
ಅಭಿನಂದನಾ ಸಮಿತಿ
**98451 92244 / 97398 03908**
**93808 22972 / 96639 77388**

ADVT.

# ದ್ವಂದ್ವ.....



ಶ್ರೀ ಪ್ರಸಾದ್

ಮನೆ ಕೊಟ್ಟಿಗೆಯಲ್ಲಿ ಯಾಕೋ ಕರುವೊಂದು ಸಿಕ್ಕಾಪಟ್ಟೆ ಸದ್ದು ಮಾಡುತ್ತಿತ್ತು . ಏನನ್ನೋ ನೋಡಿ ಅದು ಭಯಪಟ್ಟ ಹಾಗಿತ್ತು. ಅಷ್ಟರಲ್ಲಿ ಪಕ್ಕದ್ಮನೆ ಮಾದ ಓಡೋಡಿ ಗೌಡ್ರ ಮನೆಗೆ ಬಂದ. ಗೌಡ್ರೆ ಹುಲಿ ಮತ್ತೆ ಬಂದ್ಯೆತೆ ಹಟ್ಟಿಗೆ, ಬೇಗ ಕೋವಿ ತಗೊಂಡು ಬನ್ನಿ ಅಂದ. ಗೋಡೆಯಲ್ಲಿ ನೇತು ಹಾಕಿದ್ದ ಕೋವಿ ಎತ್ತಿ ಸರ ಸರನೆ ಮಾದನ ಹಟ್ಟಿಗೆ ಹೊರಟರು ಗೌಡ್ರು. ಹಟ್ಟಿಯೊಳಗೆ ಇಣುಕಿ ನೋಡಿದರೆ ಹುಲಿ ಕರುವಿನ ಕುತ್ತಿಗೆಗೆ ಬಾಯಿ ಹಾಕಿ ಎಳೆಯುತ್ತಾ ಇತ್ತು. ಕರುವನ್ನು ಕಟ್ಟಿ ಹಾಕಿದ್ದರಿಂದ ಅದನ್ನು ಎಳೆದುಕೊಂಡು ಹೋಗೋದು ಹುಲಿಗೆ ಸಾಧ್ಯವಾಗಿರಲಿಲ್ಲ.. ಕೋವಿ ಎತ್ತಿ ಹುಲಿಗೆ ಗುರಿ ಇಟ್ಟರು ಗೌಡ್ರು. ಡಂ ಡಂ ಎಂದು ಸಿಡಿಯಿತು ಗುಂಡು. ಮರುಕ್ಷಣ ಹುಲಿ ಅಲ್ಲಿಂದ ಹಟ್ಟಿ ಗೋಡೆ ಮೇಲೆ ನೆಗೆದು ಓಡಿ ಹೋಯಿತು. ಆದರೆ ಗೌಡ್ರು ಹೊಡೆದ ಒಂದು ಗುಂಡೂ ಕೂಡ ಹುಲಿಗೆ ತಾಗಿರಲಿಲ್ಲ. ಎರಡು ಗುಂಡುಗಳು ಗುರಿ ತಪ್ಪಿ ಗೋಡೆಗೆ ಹೊಡೆದಿದ್ದನ್ನು ಸ್ಪಷ್ಟವಾಗಿ ನೋಡಿದ್ದರು ಗೌಡರು. ಆದರೂ ಹುಲಿ ಓಡಿದ್ದು ಯಾಕೆ ಅಂತ ಗೌಡ್ರು ಯೋಚಿಸುತ್ತ ಇರುವಷ್ಟರಲ್ಲಿ ಗುಂಡಿನ ಸದ್ದು ಕೇಳಿದ ಮಾದ ಹಟ್ಟಿಯೊಳಗೆ ಬಂದ. ಹುಲಿ ಪರಾರಿಯಾಗಿತ್ತು. ಕರುವಿನ ಗಂಟಲಲ್ಲಿ ಹುಲಿಯ ಹಲ್ಲಿನ ಗುರುತು ಬಿಟ್ಟರೆ ಬೇರೆ ಏನು ಜಾಸ್ತಿ ಏಟಾಗಿರಲಿಲ್ಲ. ಕರುವಿನ ಗಂಟಲಿಂದ ಹರಿದ ನೆತ್ತರ ಬಿಂದುಗಳು ಹಟ್ಟಿಯೊಳಗೆ ಅಲ್ಲಲ್ಲಿ ಕಾಣುತ್ತಿತ್ತು. ಅದನ್ನು ನೋಡಿದ ಮಾದ ಅಂತು ಗೌಡ್ರು ಹೊಡೆದ ಗುಂಡುಗಳು ಹುಲಿಗೆ ಸರಿಯಾಗೇ ನಾಟಿವೆ. ಇವತ್ತೋ ನಾಳೆನೋ ಹುಲಿ ಸಾಯೋದು ಗ್ಯಾರಂಟೀ ಅಂತ ಅಕ್ಕ ಪಕ್ಕದ ಮನೆಯವರಿಗೆಲ್ಲ ಹೇಳಿ ಬಿಟ್ಟ. ತಾನು ಹೊಡೆದ ಯಾವ ಗುಂಡೂ ಹುಲಿಗೆ ತಾಗಿಲ್ಲ ಅಂತ ಗೊತ್ತಿದ್ರು ಗೌಡ್ರು ಸುಮ್ನಿದ್ರು. ಬಿಟ್ಟಿ ಪ್ರಚಾರ ಯಾರಿಗೆ ಬೇಡ. ಅಪ್ಪಿ ತಪ್ಪಿ ಮುಂದೆ ಯಾವತ್ತಾದ್ರು ದಾಳಿ ಮಾಡಿದರೆ ಆಮೇಲೆ ನೋಡಿಕೊಳ್ಳೋಣ ಅಂತ ಸುಮ್ನಿದ್ರು ಗೌಡ್ರು. ಮಾರನೇ ದಿನ ಬೆಳಗಾಗೋದ್ರೊಳಗೆ ಗೌಡ್ರು ಹುಲಿ ಕೊಂದ ಸುದ್ದಿ ಊರಿಡೀ ಹರಡಿತು, ಗೌಡ್ರ ಕತೆ ಊರ ಜನರ ಬಾಯಲ್ಲೆಲ್ಲ. ಗೌಡರಿಗೆ ಮಾತ್ರ ಗುಂಡು ತಗಲದೇ ಹುಲಿ ಓಡಿದ್ಯಾಕೆ ಅನ್ನೋದು ಮಾತ್ರ ಅರ್ಥ ಆಗ್ಲೇ ಇಲ್ಲ.. ಇಷ್ಟಕ್ಕೂ ಗೌಡ್ರು ಅಬ್ಬಬ್ಬಾ ಅಂದ್ರೆ ಒಂದೆರಡು ಸಲ ಕೋವಿ ಚಲಾಯಿಸಿರಬಹುದೇನೋ. ಅವರಿಗದು ದೊರಕಿದ್ದು ಕೂಡ ಆಕಸ್ಮಿಕ. ನಕ್ಸಲ್ ನಿಗ್ರಹ ಪಡೆಯವರು ನಕ್ಸಲ್ ಗುಂಪೊಂದರ ಅಡಗುದಾಣದ ಮೇಲೆ ನಡೆಸಿದ ದಾಳಿಯಲ್ಲಿ ಪೊಲೀಸರಿಗೆ ದೊರಕಿದ್ದ ಕೋವಿ ಅದು. ಸರಕಾರಕ್ಕೆ ಲೆಕ್ಕ ಕೊಡದೆ ಪೋಲಿಸ್ ಪಡೆಯಲ್ಲಿದ್ದ ಸಂಬಂಧಿಯೊಬ್ಬ ಅದನ್ನು ಇವರಿಗೆ ಕೊಟ್ಟಿದ್ದ. ಇವರೋ ನಮ್ಮ ತಾತ ಈ ಬಂದೂಕಿಂದ ಅದೆಷ್ಟೋ ಹುಲಿ ಜಿಂಕೆಗಳನ್ನು ಬೇಟೆ ಆಡಿದ್ದರು ಆ ಕಾಲದಲ್ಲಿ ಅಂತ ಬಿಲ್ಡ್ ಅಪ್ ತಗೊಂಡಿದ್ರು. ವಾಸ್ತವದಲ್ಲಿ ಅಟ್ಟಿಸಿಕೊಂಡು ಬಂದರೆ ಒಂದು ನಾಯಿಯ ಓಡಿಸೋವಷ್ಟು ಎದೆಗಾರಿಕೆ ಇಲ್ದೇ ಇದ್ರೂ ಗೌಡ್ರು ಮುಂಚೆ ಬೇಟೆಗೆ ಹೋಗ್ತಾ ಇದ್ರಂತೆ, ಅದೆಷ್ಟೋ ಹುಲಿ ಚಿರತೆಗಳನ್ನು ಕೊಂದಿದ್ದರಂತೆ ಅಂತ ಗ್ರಾಮಸ್ತರ ಬಾಯಲ್ಲಿ ಫೇಮಸ್ ಆಗಿದ್ದರು.

ಮಾರನೇ ದಿನ ಅದೆಷ್ಟೋ ಜಾನುವಾರುಗಳನ್ನು ಬಲಿ ಪಡೆದು ಅಮಾಯಕ ಗ್ರಾಮಸ್ತರ ನಿದ್ದೆ ಹಾಳು ಮಾಡಿದ ಆ ವ್ಯಾಘ್ರನನ್ನು ಕೊಂದ ಗೌಡರಿಗೆ ಸನ್ಮಾನ ಮಾಡಬೇಕು ಅಂತ ಊರ ಯುವಕ ಸಂಘದಲ್ಲಿ ನಿರ್ಧಾರವಾಯ್ತು. ಪಂಚಾಯ್ತಿ ಕಡೆಯಿಂದ ನಡೆಯೋ ಗ್ರಾಮಸಭೆಗೂ ಮುಂಚೆ ಸನ್ಮಾನ ಸಮಾರಂಭವನ್ನು ಊರ ಶಾಲೆಯಲ್ಲಿ ಇಟ್ಟುಕೊಂಡಿದ್ದಾರೆ ಹಾಗೂ ನೀವು ಬರಬೇಕು ಅಂತ ಗೌಡರಿಗೆ ಸಂದೇಶವು ಬಂತು. ಗೌಡರಿಗಂತೂ ಖುಶಿಯೋ ಖುಷಿ. ಮುಂದಿನ ಬಾರಿ ಚುನಾವಣೆಗೆ ಸ್ಪರ್ಧಿಸಬೇಕು ಅಂದುಕೊಂಡಿದ್ದ ಅವರಿಗೆ ಇದೊಂದು ಸುವರ್ಣಾವಕಾಶವಾಗಿ ಕಂಡು ಕೂಡಲೇ ಒಪ್ಪಿಬಿಟ್ಟರು.

ಆದರೆ ಸಂಜೆಯ ವೇಳೆಗೆ ಮಾದ ತಂದ ಸುದ್ದಿ ಗೌಡ್ರ ನೆಮ್ಮದಿಯನ್ನೇ ಹಾಳು ಮಾಡಿತ್ತು. ಘಾಟಿಯ ಬಳಿಯಲ್ಲಿ ಅರಣ್ಯ ಇಲಾಖೆ ಚೆಕ್ ಪೋಸ್ಟ್ ನಿಂದ ಕೊಂಚ ದೂರದಲ್ಲಿ ಹುಲಿಯೊಂದು ಸತ್ತಿದೆ. ಅದರ ಮೈಮೇಲೆ ಗುಂಡಿನ ಏಟುಗಳಿವೆ. ಅದು ನೀವು ಗುಂಡು ಹೊಡೆದ ಹುಲಿನೇ, ಸಂಶಯವೇ ಇಲ್ಲ. ನಾನು ಈಗ ತಾನೇ ನೋಡಿ ಬಂದೆ ಅಂದಿದ್ದ ಮಾದ. ಈಗ ಗೌಡ್ರ ಮನಸ್ಸು ಗೊಂದಲದ ಗೂಡಾಗಿತ್ತು. ನನ್ನ ಕೋವಿಯ ಗುಂಡು ಹುಲಿಗೆ ತಾಗೆ

ಇಲ್ಲ ಇನ್ನು ಸಾಯೊದು ಹೇಗೆ? ಬಹುಶ: ಆ ಹುಲಿನೇ ಬೇರೆ ಈ ಹುಲಿನೇ ಬೇರೆ. ಆದರೂ ಗುಂಡೇ ತಾಗದೆ ಹುಲಿ ಹಟ್ಟಿಯಿಂದ ಓಡಿದ್ದಾದರು ಯಾಕೆ? ಇಲ್ಲಿ ಬರೋ ಮುಂಚೆನೇ ಏನಾದರು ಅದಕ್ಕೆ ಗುಂಡು ತಗುಲಿತ್ತೋ ಏನೋ. ಪ್ರಾಯಶಃ ಅದಕ್ಕೆ ಇರಬಹುದು ಅದಕ್ಕೆ ಕರುವನ್ನು ಎಳೆದುಕೊಂಡು ಹೋಗೋಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಮತ್ತೆ ನಾನು ಗುಂಡು ಹಾರಿಸಿದಾಗ ಗುಂಡಿನ ಶಬ್ದ ಕೇಳಿ ಭಯಪಟ್ಟು ಓಡಿರಬಹುದು. ಈಗ ಅರಣ್ಯ ಇಲಾಖೆಯ ಅಧಿಕಾರಿಗಳೇನಾದ್ರು ಹುಲಿಯ ಸಾವಿನ ತನಿಖೆ ಆರಂಭಿಸಿದರೆ ನನಗೆ ಆಪತ್ತು. ನಮ್ಮ ಗೌಡರೇ ಹುಲೀನ ಕೊಂದಿದ್ದು ಅಂತ ಹೆಮ್ಮೆಯಿಂದ ಗ್ರಾಮಸ್ತರು ಹೇಳಿಕೊಳ್ಳುತ್ತಾರೆ. ಕಾನೂನಿನಲ್ಲಿ ನರಭಕ್ಷಕ ಹುಲಿಯನ್ನು ಕೊಲ್ಲಬಹುದು ಅದೂ ಕೂಡ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಮಾತ್ರ. ಆದರೆ ನಮ್ಮ ಊರಿನಲ್ಲಿ ಕಾಣಿಸಿಕೊಂಡ ಹುಲಿ ಅಪ್ಪಿ ತಪ್ಪಿಯೂ ಗ್ರಾಮಸ್ತರ ಮೇಲೆ ಹಲ್ಲೆ ಮಾಡಿರಲಿಲ್ಲ. ಅದಕ್ಕೆ ಗ್ರಾಮಸ್ತರು ಪದೇ ಪದೇ ಹುಲಿಯ ಕಾಟದ ಬಗ್ಗೆ ಅರಣ್ಯಾಧಿಕಾರಿಗಳಿಗೆ ದೂರು ನೀಡಿದ್ದರೂ ಏನೂ ಪ್ರಯೋಜನವಾಗಿರಲಿಲ್ಲ. ಅಪ್ಪಿ ತಪ್ಪಿ ಅರಣ್ಯಾಧಿಕಾರಿಗಳ ಕೈಗೇನಾದ್ರು ನನ್ನ ಹೆಸರು ಸಿಕ್ಕಿಹಾಕಿಕೊಂಡರೆ ಆ ದೇವರೇ ಗತಿ. ವರ್ಷಗಟ್ಟಲೆ ಕೋರ್ಟು ಕಚೇರಿ ಸಹವಾಸ ಖಚಿತ. ಅದೂ ಕೂಡ ನಾನು ಮಾಡದೇ ಇರೋ ತಪ್ಪಿಗೋಸ್ಕರ. ಹಾಗಂತ ನಾನು ಹುಲೀನ ಹೊಡೆದಿಲ್ಲ, ನಾನು ಹೊಡೆದ ಗುಂಡು ಹುಲಿಗೆ ತಾಗಿಲ್ಲ ಅಂದ್ರೆ ಗ್ರಾಮಸ್ತರು ನನ್ನನ್ನು ಕೀಳಾಗಿ ಕಾಣಬಹುದು. ಇವನೊಬ್ಬ ಹೇಡಿ ಸುಳ್ಳುಗಾರ ಅಂತಾನು ಅಂದುಕೊಳ್ಳಬಹುದು. ಇಷ್ಟು ವರ್ಷ ಕಾಯ್ದುಕೊಂಡ ಮಾನ ಮರ್ಯಾದೆ ಎಲ್ಲ ಹೋಗುತ್ತೆ. ಚುನಾವಣೆಯಲ್ಲಿ ಇವರ ಓಟು ಪಡೆದು ಗೆಲ್ಲೋದು ಕನಸಿನ ಮಾತೇ ಸರಿ. ಗೌರವ, ಸನ್ಮಾನ ರಾಜಕೀಯ ಅವಕಾಶ ಒಂದು ಕಡೆ, ಕೋರ್ಟು ಕಚೇರಿ ಇನ್ನೊಂದೆಡೆ. ತಕ್ಕಡಿಯಲ್ಲಿ ತೂಗೋದು ಕಷ್ಟವಾಯ್ತು ಗೌಡರಿಗೆ. ಅದಕ್ಕೆ ಮನೆಯ ಜಗಲಿಯಲ್ಲಿ ಶತ ಪಥ ತಿರುಗಾಡ್ತಾ ಇದ್ದರು.

ಅಪ್ಪಿ ತಪ್ಪಿ ಏನಾದ್ರು ಕೋರ್ಟು ಕಚೇರಿ ಅಂತ ಬಂದ್ರೆ ಇನ್ನು ಒಳ್ಳೇದೆ ಆಯ್ತು ಸಹಾನುಭೂತಿ ಜಾಸ್ತಿ ಆಗಿ ಇನ್ನು ಒಂದಷ್ಟು ಓಟುಗಳು ಜಾಸ್ತಿನೇ ಬೀಳ್ತಾವೆ ಅಂದುಕೊಂಡ ಗೌಡ್ರ ಮುಖದಲ್ಲಿ ಮುಗುಳ್ನಗೆ ಬಂತು. ಹಾಗೆ ಜಗಲಿಯಿಂದ ಒಳನಡೆದ ಗೌಡರು ಹಾಸಿಗೆಗೊರಗಿದರು. ಯೋಚನೆ ಮಾಡಿ ಸುಸ್ತಾಗಿದ್ದ ಗೌಡ್ರನ್ನು ನಿದ್ರಾದೇವಿ ಆವರಿಸಿಕೊಂಡಳು. ಗೌಡರ ಕನಸಲ್ಲಿ ಹುಲಿಯೊಂದು ಬಂದು ಗಹ ಗಹಿಸಿ ನಕ್ಕಂತಾಯ್ತು, ಅದರ ಮೂತಿ ಮಾತ್ರ ಮಾದನ ಹಟ್ಟಿಯಲ್ಲಿ ಕಂಡಿದ್ದ ಹುಲಿಯನ್ನೇ ಹೋಲುತ್ತಿತ್ತು. ಹರಕೆಯ ಕುರಿಗೆ ಹಾರ ಹಾಕಿದಂತೆ ಅದರ ಕುತ್ತಿಗೆಯಲ್ಲಿ ಚುನಾವಣೆಯ ಬಿತ್ತಿ ಪತ್ರವೊಂದು ನೇತಾಡುತ್ತಿತ್ತು !!!!!!!!!!!!!!


# ಬಂಟರ ಸಂಘ ಬೆಂಗಳೂರು

## ಬಂಟ್ಸ್ ಸೇವಾದಳ

ಹುಟ್ಟು ಹಾಗೂ ಸಾವು ಮನುಷ್ಯ ಜೀವನದ ಸಹಜ ಪ್ರಕ್ರಿಯೆಗಳಾಗಿದ್ದು, ಬೆಂಗಳೂರು ಹಾಗೂ ಸುತ್ತಮುತ್ತ ನೆಲೆಸಿರುವ ಸಮಾಜ ಬಾಂಧವರ ನಿಧನದ ಸಂದರ್ಭದಲ್ಲಿ ಬಂಟ್ಸ್ ಸೇವಾದಳ ಸಮಿತಿಯ ವತಿಯಿಂದ ಮೃತರ ಅಂತ್ಯಕ್ರಿಯೆ ವಿಧಿ-ವಿಧಾನ ನೆರವೇರಿಸಲು ಅಗತ್ಯ ಸಹಕಾರ / ಮಾಹಿತಿ ನೀಡಲು ಹಾಗೂ ಅಂತ್ಯಕ್ರಿಯೆಗೆ ಬೇಕಾಗುವ ಸಾಮಾಗ್ರಿ ಮತ್ತು ಇನ್ನಿತರ ಮಾಹಿತಿಯನ್ನು ಒದಗಿಸಲು ನಿರ್ಧರಿಸಲಾಗಿದೆ. ಸದಸ್ಯ ಬಾಂಧವರು ತುರ್ತು ಸಂದರ್ಭದಲ್ಲಿ ಈ ಕೆಳಗಿನ ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

**ಮೊ : 97412 20559 / 70221 19739.**

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಸತೀಶ್ ಶೆಟ್ಟಿ. ವಾಲ್ತೂರು**
ಸಂಚಾಲಕರು, ಬಂಟ್ಸ್ ಸೇವಾದಳ

**ಉಮೇಶ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್, ಬಂಟ್ಸ್ ಸೇವಾದಳ

# Peace education: a holistic path to harmony


Dr. Santosh Shetty

Peace is a universal aspiration, and education is a powerful tool for achieving it. The concept of "peace education" has gained prominence as societies seek to promote understanding, tolerance, and harmony in an increasingly interconnected world. Peace education is a comprehensive approach that aims to cultivate empathy, impart conflict resolution skills, stimulate critical thinking, and foster global awareness. It encourages individuals to comprehend diverse perspectives, equips them with non-violent conflict resolution abilities, challenges biases, and underscores global interconnectedness. This holistic method promotes peaceful coexistence, extending beyond conventional subjects, to create an environment rich in understanding, cooperation, and respect.

In a world grappling with complex challenges, from environmental crises to political conflicts, the significance of peace education is increasingly apparent. It is not a utopian ideal but a practical means to construct a future marked by enhanced peace and harmony. By nurturing individuals equipped with the skills and values needed for peaceful coexistence, we empower them to be catalysts for positive change. Peace education is more than just an educational initiative; it represents a vital investment in our collective future. It holds the promise of a world that is more compassionate, tolerant, and peaceful.

Within our culture, peace education resonates with the fundamental values of spirituality, compassion, and interconnectedness, which form the core of our faith. It offers a tangible framework for individuals to coexist harmoniously with themselves, their communities, and the world at large. Gurudev Sri Sri Ravi Shankar, a renowned spiritual leader, humanitarian, and the founder of the Art of Living underscores the urgent necessity of integrating peace education into all educational curricula. His vision is to ensure that every child on this planet does not grow up believing that they can serve God through acts of bloodshed and violence.

Sanātana Dharma has consistently placed significant emphasis on value-based spiritual education, referred to as Paravidya. This educational approach seeks to enlighten and purify individuals' inner capacities and selves, with the ultimate goal of nurturing their development as morally upright human beings. In contrast, Aparavidya primarily guides individuals towards the material world, equipping them with the skills necessary for their livelihood. Two streams of wisdom coexist within this tradition: the traditional and the modern. Although contemporary education currently predominates, it is important to acknowledge that we can derive valuable insights from our past that often surpass the teachings of the present.

Peace and violence have their roots in the inner selves of individuals, shaped by the interplay of four essential elements of the self: Mana (broad mind), Buddhi (intellect), Ahankara (ego), and Chitta (narrow mind). The Vedic tradition, drawing from the wisdom and experiences of ancient sages, offers a wealth of concepts, including forgiveness, non-violence, justice, non-discrimination, and self-transformation.

It is crucial for us to rediscover the principles and values upheld by this tradition, serving as a reminder of the fundamental goal shared by all faith traditions: the pursuit of peace. The unity of man and woman, the self, and the cosmic self, along with the harmonization of knowledge (Gyana) and Science (Bigyana), lay down the fundamental foundations for peace.

Throughout the last century, there has been a noticeable increase in societal awareness and concern regarding deeply distressing manifestations of violence, such as ecocide, genocide, contemporary warfare, ethnic animosity, racial discrimination, sexual abuse, and domestic violence. Simultaneously, there has been a significant expansion in the domain of peace education, wherein educators, spanning from early childhood care to adult education, deploy their expertise to raise awareness among fellow citizens about impending perils and provide guidance on the avenues to achieve peace.

Peace education brings multiple advantages, including the reduction of violence through teaching peaceful conflict resolution and consideration of consequences. It enhances communication skills, strengthening both personal and global relationships, as effective expression and listening are pivotal for a more peaceful world. Peace education fosters cultural understanding, bridging gaps between diverse cultures and promoting tolerance in our globalized society. It imparts early warning signs and resolution strategies, preventing conflicts from escalating. Most importantly, it empowers individuals to actively promote peace, advocate for positive change in their communities, and engage in conflict resolution, thus contributing to a more peaceful and harmonious society.

To explore the foundations of peace education, we turn to various scriptures and scholarly articles that offer profound insights into its essence and significance. The Bible emphasizes peace as a central theme, with the famous phrase "blessed are the peacemakers" underlining the importance of actively working towards peace. The Quran promotes peace as a fundamental principle, encouraging believers to respond to evil with goodness and to resolve disputes through peaceful means. The Bhagavad Gita imparts “wisdom about inner and outer peace”, stressing the importance of self-realization and inner harmony as a foundation for promoting peace in the world.

In our diverse and interconnected world, peace education serves as a vital tool for nurturing a culture of peace. By combining the wisdom of ancient texts with modern research, we can inspire future generations to strive for a more peaceful and harmonious world. As we continue to explore and expand the boundaries of peace education, we move one step closer to achieving a more peaceful and just society. “Shanti” is a Sanskrit term that translates to "peace." The repetition of "Shanti" three times, as in "Om Shanti, Shanti, Shanti," is a means of invoking peace in three dimensions of life: physical, mental, and spiritual. It serves as a prayer or wish for peace to permeate all aspects and directions of existence. The repetition also intensifies the prayer, underscoring its significance. We aspire for every being in this world to discover eternal peace in their life.

# Bunts' Sangha R.N.S Composite PU College Annual Athletic Meet 2023 - 24 Report



The Annual Athletic Meet for the academic year 2023-24 was held on 08-12-2023, Friday at University Grounds, Bengaluru. The Chief Guest was Mr. Sukesh Hegde, Pro Kabbadi Player and Ekalavya Awardee along with the President of Bunts Sangha Sri Muralidhar Hegde, the Secretary and Convenor of Bunts Sangha Sri Anandram Shetty, the Principal, Vice - Principal, Heads of CBSE and ICSE, college staff and students were part of the Athletic Meet. Executive and Governing Council members were also present.

All the dignitaries were welcomed by the Sports Flag, Guard of Honour was given by the various Houses of CBSE, ICSE and College wing. The programme began with the Invocation Song by school choir group. The welcome address was done by the Principal Sri Yesudas L. Lighting the torch was done by the sports achievers from school and college wing. The oath was administered by the sports secretary of the college Master Charan R to all the athletes who were participating in the Annual Athletic Meet. The Convenor spoke about the balance required between education and co-curricular activities. The Chief Guest advised the students about the importance of education as well as the opportunities which are there for sports. The president addressed the students and guided them about true sportsmanship and life. Various sports achievers for the academic year 2023-24 were felicitated by the dignitaries. The Chief Guest was felicitated by the Management. Then the Athletic Meet was declared open by the Chief Guest. Vote of thanks was rendered by the CBSE Head Boy.

Various athletic like 100 Mts, 200 Mts, 400 Mts, 800 Mts Running Race for both I & II PUC Boys and Girls including Long Jump, High Jump and 4X100 Mts Relay was conducted for the School as well as College.

The valedictory function began by announcing the overall champions of college section and the House rankings of CBSE and ICSE streams. The flag was lowered and handed over to the Principal by the Physical Education Dept. The closure of the Athletic Meet was announced by the Principal. The entire event came to an end by singing the National Anthem.

# Bunts' Sangha RNS Composite PU College
# SPOORTHY CULTURAL FEST - 2023

Every child is unique in his/her own way.

Every child has an ability which needs to be recognized and rewarded.

Cultural Fest is a platform for the students to showcase their innate talents and potential. Bunts' Sangha RNS Composite PU College had organized "Spoorthy Fest" for 1st and 2nd PU students on Monday, 27th November, 2023 in Bunts' Sangha Auditorium.

A Spectra of events was organised for the whole day. Students were in their ethnic best with vibrant colour palette.

Formal function was inaugurated by Dr. Ramesh Krishna, Director cum Dean, Bangalore Medical College and Research Institute. After the welcome address and lighting the lamp by the dignitaries, Honorary Secretary and Convenor of Bunts' Sangha, Sri Anandram Shetty B addressed the student fraternity about maintaining the integrity of the institution.

The Chief Guest spoke extensively about different and varied career paths could be chosen by the students.

The Treasurer, Sri Amarnath Shetty H and the Principal motivated the students with their words of wisdom.

The cultural extravaganza began with the melodious group songs followed by mad ads. Post lunch, students competed in group dance competition followed by breathtaking ramp walks by beautifully and artistically dressed young models.

The Spoorthy cultural fest indeed proved to be a wonderful platform for the students to discover their uniqueness.






# ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆಗಳು
















# ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ

















HIGHLIGHTS:

- Dhow Marina Cruise
- Dubai City Tour
- Burj Khalifa
- Dubai Musical Fountain
- Visit to Global Village
- Dessert Safari with Bbq Dinner
- Miracle Garden
- Full Day AbuDhabi Tour
- Sheikh Zayed Grand Mosque

5 Full Days'
GROUP TOUR

Package Cost:
53900/- Plus Airfare &
5% TCS (refundable)
Rate - Ex Mumbai / Blr / Mlr

Inclusions:

4 Nights Accomodation at 4*Hotel, All Meals,
All Entry Fees, Private AC Coach, English Speaking Guide, Sighteseeing as Mentioned in the itinerary,

Cost Excludes : To & Fro Airfare Plus All Expenses of Personal Nature

For any further details please contact:

IATA Approved

Canara Tours & Travels Pvt. Ltd
....... GOOD PEOPLE TO TRAVEL WITH

**Mr. S. B. Shetty – 9820510043**
101, Udyog Kshetra, L.B.S. Marg, Off Link Road, Mulund (W), Mumbai-80. | Tel.: 41115000 | Fax : 41115005

**Mr. T. T. Mada – 9820632934**
2, Srishti Complex, Opp. L & T Gate No.7, Saki Vihar Rd., Powai, Mumbai-72. Tel. : (022) 42215000
Fax : 91-22-28571468 E-mail : info@canaratravels.com | Website : www.canaratravels.com

**Mr. Prabhat Shetty - 9481950340**
204, Kirthi Sagar, Vidyaratnanagar Manipal - 576104

**Mr. Varun Mallya - 9480744833**
G/3, Inland Ornate Opp. Ocean Pearl, Navabharath Circle, Kodialbail, Mangalore-575003 Tel.: 0824-4258505/06

ADVT.

# ಕಟೀಲುಶ್ರೀ ದುರ್ಗಾಪರಮೇಶ್ವರಿ ಜ್ಯೋತಿಷ್ಯ ಪೀಠ

**ಪ್ರಧಾನ ತಾಂತ್ರಿಕ ಶ್ರೀ ಶ್ರೀ ವಿಜಯೇಂದ್ರ ಭಟ್**

ದೈವ ಪ್ರಶ್ನೆ ಅಷ್ಟಮಂಗಳ ಪ್ರಶ್ನೆ ಜಾತಕ ಹಸ್ತ ಫೋಟೋ ನೋಡಿ ಸಂಪೂರ್ಣ ಭವಿಷ್ಯವನ್ನು ತಿಳಿಸುತ್ತಾರೆ

**ನಿಮ್ಮ ಸಮಸ್ಯೆ ಏನೇ ಇರಲಿ ಕೇರಳಿಯ ಯಂತ್ರ ಮಂತ್ರ ತಾಂತ್ರಿಕ ವಿಧಿ ವಿಧಾನಗಳಿಂದ ಶ್ರೀ ಕಟೀಲು ದುರ್ಗಾಪರಮೇಶ್ವರಿ ಅನುಗ್ರಹದಿಂದ. 5 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ**



**ಶ್ರೀ ಕಟೀಲು ದುರ್ಗಾಪರಮೇಶ್ವರಿ ದೇವಿ ಆರಾಧಕರು**

ದೂರದ ಊರಿನವರಿಗೆ ಫೋನ್ ಮೂಲಕ ಪರಿಹಾರ ತಿಳಿಸುತ್ತಾರೆ **99452 22228**

**ಮನೆಯಲ್ಲಿ ಅಶಾಂತಿ ಮಾನಸಿಕ ಕಿರಿಕಿರಿ ವಿದ್ಯಾಭ್ಯಾಸದಲ್ಲಿ ತೊಂದರೆ ಮದುವೆ ಯೋಗ ಬೇಗನೆ ಕೂಡಿಬರಲು ಸ್ತ್ರೀ ಪುರುಷ ಪ್ರೇಮ ಆಕರ್ಷಣ ಸಿದ್ದಿ ದೂರವಾಗಿರುವ ಪತಿ ಪತ್ನಿ ಒಂದಾಗಲು ಡೈವರ್ಸ್ ಸಮಸ್ಯೆ ಸಂತಾನ ಲೈಂಗಿಕ ದೋಷ ಹಣಕಾಸಿನ ಸಮಸ್ಯೆಯಿಂದ ಮುಕ್ತಿ ಪಡೆಯಲು ಶತ್ರುಗಳು ಮೆತ್ತಗಾಗಿ ಮೂಲೆ ಸೇರಲು ಉದ್ಯೋಗ ವ್ಯಾಪಾರದಲ್ಲಿ ಪ್ರಗತಿ ಹೊಂದಲು ಮಾಟ ಮಂತ್ರ ವಶೀಕರಣ ನಿವಾರಣೆ ಅತ್ತೆ ಸೊಸೆ ಕಲಹ ಅದೃಷ್ಟ ಪ್ರಾಪ್ತಿ ಸಮಸ್ಯೆ ಯಾವುದೇ ಇರಲಿ ಪರಿಹಾರ ಶತಸಿದ್ಧ**

**ಸ್ಥಳ :- ಕೆ ಎಸ್ ರಾವ್ ರೋಡ್, ಮಂಗಳೂರು ಹಾಗು ಡಿವಿಜಿ ರೋಡ್ ಬೆಂಗಳೂರು**

ADVT.


Creating life - long bonds
Since 21 Years
HOME FOR ALL
BUDGET FLATS 18 LAKHS ONWARDS
COST INCLUDING GST
JUST PAY ₹50K
TO BOOK YOUR DREAM HOME
MATHA SHABARI RESIDENCY
NH-66, MUKKA
MATHA SUSHIGANGA RESIDENCY
NH-66 MULKY
MATHA GANGA RESIDENCY
PADMANOOR - KINNIGOLI
MATHA NANDINI RESIDENCY
PAKSHIKERE
MATHA RESIDENCY
NH-66, PADUBIDRI
MATHA GURU RESIDENCY
NH-66, PADUBIDRI
Project Approved in all Nationalized Bank
LAND FOR SALE / PURCHASE / JOINT DEVELOPMENT
MATHA BUILDERS
SURATHKAL: Thara Towers, 2nd Floor, International Airport Road, Surathkal, Mangaluru - 575 014.
MUMBAI: Shop No. 8, Bldg. No. 1, New Venkateshwar Nagar, Cabin Road Bhayandar, (E), Thane Dist - 401 105.
72 59 20 99 66
99 80 71 19 66
mathabuilders18@gmail.com
www.mathabuilders.com
CREDAI
70 22 48 16 66
72 59 26 99 66 (Mumbai)
Best Investment with Assured Rental Return

ADVT.


BUNTARA SANGHA (R)
PERDOOR MANDALA
GRAND OPENING on 11-02-2024
SMT. SARVANI PALLI SHRINIVAS HEGDE
Convention Hall
PERDOOR
AMENITIES
* 900 SITTING CAPACITY A/C HALL
* 600 SITTING CAPACITY DINING HALL
* 600 VEHICLE PARKING FACILITY
* SEPERATE VEG & NON VEG KITCHEN
* 6 A/C DELUX ROOMS
* ON NATIONAL HIGHWAY 169A
FOR MORE DETAILS & HALL BOOKING CALL
8884130064 9980251104
ಶುಭಕೋರುವವರು: ಶ್ರೀ ಬಿ. ದಿನೇಶ್ ಹೆಗ್ಡೆ

ADVT.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## ವಿವಾಹ ವೇದಿಕೆ

ಅರ್ಪಿಸುವ

# "ವಧೂ-ವರರ ಸಮಾವೇಶ-2024"



ಬೆಂಗಳೂರು ಬಂಟರ ಸಂಘದ ವಿವಾಹ ವೇದಿಕೆ ವತಿಯಿಂದ ಇದೇ ಬರುವ 04 ಫೆಬ್ರವರಿ 2024 ರಂದು ವಧೂ-ವರರ ಸಮಾವೇಶವನ್ನು ಏರ್ಪಡಿಸಲು ನಿರ್ಧರಿಸಲಾಗಿದೆ.

ವಧೂ-ವರರ ಆಯ್ಕೆ ಸಮಾವೇಶಕ್ಕೆ ವಿವಾಹಾಕಾಂಕ್ಷಿಗಳು ತಮ್ಮ ಭಾವಚಿತ್ರ, ಸ್ವ-ವಿವರ ಮತ್ತು ಜಾತಕದೊಂದಿಗೆ ಈ ಸಮಾವೇಶದಲ್ಲಿ ಭಾಗವಹಿಸಬೇಕಾಗಿ ಈ ಮೂಲಕ ವಿನಂತಿಸಿ ಕೊಳ್ಳುತ್ತಿದ್ದೇವೆ.

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಂಗಣದಲ್ಲಿ ದಿನಾಂಕ 04 ಫೆಬ್ರವರಿ 2024 ಭಾನುವಾರದಂದು ಬೆಳಗ್ಗೆ 9.30 ರಿಂದ ಸ್ಥಳದಲ್ಲೇ ನೋಂದಾವಣೆ ನಡೆಯಲಿದೆ.

ವಿ. ಸೂ. : 04 ಫೆಬ್ರವರಿ 2024 ಭಾನುವಾರದಂದು ನಡೆಯಲಿರುವ ವಧೂ-ವರರ ಆಯ್ಕೆ ಸಮಾವೇಶದ ಪ್ರಯುಕ್ತ ಜನವರಿ ತಿಂಗಳಿಂದ ಫೆಬ್ರವರಿ 04 ರ ವರೆಗೆ ಸಂಘದಲ್ಲಿ ಪ್ರತೀ ಶನಿವಾರ ಮಧ್ಯಾಹ್ನ ಸಮಯ 3.00 ರಿಂದ 5.00 ರವರೆಗೆ ನಡೆಯುವ ವಿವಾಹ ವೇದಿಕೆ ಕಾರ್ಯಕ್ರಮವು ಇರುವುದಿಲ್ಲ.

ಹೊಸದಾಗಿ ನೊಂದಾಯಿಸಲು ಇಚ್ಛಿಸುವವರು ತಮ್ಮ ವಿವರಗಳನ್ನು ಈ ಕೆಳಗೆ ನಮೂದಿಸಿದ ಸ್ವರೂಪದಲ್ಲಿ vivahavedike.2024@gmail.com ಗೆ ಕಳುಹಿಸಬೇಕಾಗಿ ವಿನಂತಿ.

ಹೆಸರು, ಹುಟ್ಟಿದ ದಿನಾಂಕ, ವಿದ್ಯಾರ್ಹತೆ, ಫೋಟೋ (JPG Format)

**ತಮಗೆಲ್ಲರಿಗೂ ಆದರದ ಸ್ವಾಗತ**

ಆನಂದರಾಮ ಶೆಟ್ಟಿ ಬಿ.
ಗೌರವ ಕಾರ್ಯದರ್ಶಿ

ಎಂ. ಮುರಳೀಧರ ಹೆಗ್ಡೆ
ಅಧ್ಯಕ್ಷರು

ಎ. ಸುರೇಂದ್ರ ಶೆಟ್ಟಿ
ಸಂಚಾಲಕರು, ವಿವಾಹ ವೇದಿಕೆ
ಮೊ. : 9620045190

ಶೋಭಾ ಶೇಖ
ಚೇರ್‌ಪರ್ಸನ್, ವಿವಾಹ ವೇದಿಕೆ
ಮೊ. : 9901885998

ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ವಿವಾಹ ವೇದಿಕೆ ಸದಸ್ಯರು

# ಶ್ರದ್ಧಾಂಜಲಿ



**ಶ್ರೀ ಎಂ. ಸದಾನಂದ ಹೆಗ್ಡೆ**
**ಸದಸ್ಯತ್ವ ಸಂಖ್ಯೆ: CL007904**

ವಿಜಯ ಬ್ಯಾಂಕ್‌ನ ನಿವೃತ್ತ ಜನರಲ್ ಮ್ಯಾನೇಜರ್ ಮಾರಳ್ಳಿ ಶ್ರೀ ಎಂ. ಸದಾನಂದ ಹೆಗ್ಡೆಯವರು ದಿನಾಂಕ 08.12.2023ರಂದು ತಮ್ಮ 75ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಆಜ್ರಿ ಶ್ರೀ ನಾಗರತ್ನ ಹೆಗ್ಡೆ, ಇಬ್ಬರು ಪುತ್ರಿಯರು, ಇಬ್ಬರು ಮೊಮ್ಮಕ್ಕಳು, ಇಬ್ಬರು ಸಹೋದರಿಯರು, ಇಬ್ಬರು ಸಹೋದರರು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಡಾ. ಸುಂದರ್ ಹೆಗ್ಡೆ ಕೆ.**
ಸದಸ್ಯತ್ವ ಸಂಖ್ಯೆ: CL005589

ಶಿರ್ವಕೋಡು ಡಾ. ಸುಂದರ್ ಹೆಗ್ಡೆಯವರು ದಿನಾಂಕ 24.12.2023ರಂದು ತಮ್ಮ 94ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಪೆರ್ಡೂರು ಶ್ರೀಮತಿ ಸುಗುಣ ಎಸ್. ಹೆಗ್ಡೆ, ಮೂವರು ಪುತ್ರಿಯರು, ಓರ್ವ ಪುತ್ರ, ಐವರು ಮೊಮ್ಮಕ್ಕಳು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ನಿತಿನ್ ಶೆಟ್ಟಿ ಎಸ್.**
**ಸದಸ್ಯತ್ವ ಸಂಖ್ಯೆ: LM003260**

ಬೆಂಗಳೂರು ಬಂಟರ ಸಂಘದ ದಾನಿಗಳು ಪ್ರೊಫೆಸರ್ ದಿ. ಎಸ್. ಶಿವರಾಮ ಶೆಟ್ಟಿ ಮತ್ತು ಶ್ರೀಮತಿ ಸುನಂದ ಎಸ್. ಶೆಟ್ಟಿಯವರ ಪುತ್ರ ಬಸ್ರೂರು ಶ್ರೀ ಎಸ್. ನಿತಿನ್ ಶೆಟ್ಟಿಯವರು ದಿನಾಂಕ 01.01.2024ರಂದು ತಮ್ಮ 61ನೇ ವಯಸ್ಸಿನಲ್ಲಿ ನಿಧನರಾದರು. ಬೆಂಗಳೂರಿನಲ್ಲಿ ಉದ್ಯಮವನ್ನು ನಡೆಸುತ್ತಿದ್ದ ಇವರು ತಮ್ಮ ಪತ್ನಿ ಕಾರ್ಕಳ ಶ್ರೀಮತಿ ಸ್ವಪ್ನ ಎಸ್. ಶೆಟ್ಟಿ, ಇಬ್ಬರು ಪುತ್ರಿಯರು, ಓರ್ವ ಸಹೋದರ, ಇಬ್ಬರು ಸಹೋದರಿಯರು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಶಶಿರಾಜ್ ಪಿ. ಶೆಟ್ಟಿ**
**ಸದಸ್ಯತ್ವ ಸಂಖ್ಯೆ: CL007388**

ನಂದಳಿಕೆ ಶ್ರೀ ಶಶಿರಾಜ್ ಪಿ. ಶೆಟ್ಟಿ ದಿನಾಂಕ 04.01.2024ರಂದು ತಮ್ಮ 50ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಕಟೀಲು ಶ್ರೀಮತಿ ನೀತು ಎಸ್. ಶೆಟ್ಟಿ, ಓರ್ವ ಪುತ್ರ, ಇಬ್ಬರು ಸಹೋದರಿಯರು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.


PILGRIMAGE TOUR TO VARANASI-PRAYAGRAJ-AYODHYA WITH VIP DARSHAN AT NEWLY BUILT RAM JANMABHUMI TEMPLE.
5 NT / 6 DAYS TOUR
FROM 1ST MARCH TO 6TH MARCH 2024
FROM 15TH MARCH TO 20TH MARCH 2024
FROM 27TH MARCH TO 1ST APRIL 2024
HIGHLIGHTS: VARANASI-Kashi Vishwanath Temple, Holy Ganga Ghats Aarti, Kala Bhairav Temple, Prayagraj - Sita Madi, Triveni Sangam, Ayodhaya - Newly Built Ram Janmabhumi Temple, Nageshwarnath Temple, Hanuman Ghadi, Kanak Bhavan.
PACKAGE COST INR 45000/- PER PERSON - ALL INCLUSIVE - EX-MUMBAI
Cost Includes : Airfare from Mumbai to Varanasi & from Ayodhya to Mumbai or from Lucknow to Mumbai Accommodation: 2Nt Varanasi, 1Nt Prayagraj, 2Nt Ayodhya with all meals. All transfers & sightseeing by AC Coach. Group accompanied by experienced Tour Manager. Cost excludes: All expenses of personal nature.
For any further details please contact:
IATA Approved
Canara Tours & Travels Pvt. Ltd
....... good people to travel with
Mr. S. B. Shetty – 9820510043
101, Udyog Kshetra, L.B.S. Marg, Off Link Road, Mulund (W), Mumbai-80. I Tel.: 41115000 I Fax : 41115005
Mr. T. T. Mada – 9820632934
2, Srishti Complex, Opp. L & T Gate No.7, Saki Vihar Rd., Powai, Mumbai-72. Tel. : (022) 42215000
Fax : 91-22-28571468 E-mail : info@canaratravels.com I Website : www.canaratravels.com
Mr. Prabhat Shetty - 9481950340
204, Kirthi Sagar, Vidyaratnanagar Manipal - 576104
Mr. Varun Mallya - 9480744833
G/3, Inland Ornate Opp. Ocean Pearl, Navabharath Circle, Kodialbail, Mangalore-575003 Tel.: 0824-4258505/06
Mr. Suresh Ajila 09448089189 (Bangalore)

ADVT.

ಸ್ಥಾಪನೆ: 1997

ದೂರವಾಣಿ : 23393444
ಮೊಬೈಲ್ : 8722006082

# ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ
# Vijaya Pathina Souharda Sahakari Niyamitha

ನಂ 5, ಎಸ್.ಜೆ. ಎಲಿಗೆನ್ಸ್, 4ನೇ ಮಹಡಿ, ಚಂದ್ರ ಲೇಔಟ್ ಮುಖ್ಯ ರಸ್ತೆ, ಇನ್‌ಕಮ್‌ಟ್ಯಾಕ್ಸ್ ಲೇಔಟ್, ವಿಜಯನಗರ, ಬೆಂಗಳೂರು – 560 040.
**Email : vijaya_souharda@yahoo.in, vijayasouharda@rediffmail.com**

**ವಿಜಯ ಪತ್ತಿನ ಸೌಹಾರ್ದ ಸಹಕಾರಿ – ಪ್ರಗತಿ ಪಥದತ್ತ**

ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದ್ದು, 25 ಸಂವತ್ಸರಗಳನ್ನು ಮುಗಿಸಿರುವುದು ಸಂತೋಷದಾಯಕ. ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿ ದರವನ್ನು ನೀಡಲಾಗುತ್ತಿದೆ. ಷೇರುಗಳನ್ನು ಖರೀದಿಸಿ ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಠೇವಣಿ, ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪಿಗ್ಮಿ ಸಂಗ್ರಹಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಇವುಗಳ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತೆ ಕೋರಲಾಗಿದೆ.

**ಸಾಲಗಳು**

- ಜಾಮೀನು ಸಾಲ : ರೂ. 50,000.00
- ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿನಿಂದ 36 ತಿಂಗಳವರೆಗೆ
- ವ್ಯಾಪಾರ ಸಾಲ : 1 ಲಕ್ಷದಿಂದ 20 ಲಕ್ಷ
- ಗೃಹ ನಿರ್ಮಾಣ ಸಾಲ ಮತ್ತು ನಿವೇಶನ ಖರೀದಿ ಸಾಲ : 1 ಲಕ್ಷದಿಂದ 60 ಲಕ್ಷ – 120 ತಿಂಗಳು ಗರಿಷ್ಠ

**ಸಾಲದ ಬಡ್ಡಿ ದರ : 1 ಲಕ್ಷದವರೆಗೆ 14%, 1 ಲಕ್ಷ ಮೇಲ್ಪಟ್ಟು 13%**

2016–17 ರಿಂದ ಸತತವಾಗಿ 15% ಹಾಗೂ 2020 –2021ರಲ್ಲಿ 12% ಮತ್ತು 2021–2022 ರಲ್ಲಿ 13%
ವಾರ್ಷಿಕ ಡಿವಿಡೆಂಡ್ ವಿತರಣೆ
ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೆ ಸಹಕರಿಸಿ

**ವ್ಯವಹಾರದ ವೇಳೆ :**

| | ಬೆಳಿಗ್ಗೆ | ಸಾಯಂಕಾಲ |
|---|---|---|
| ಸೋಮವಾರದಿಂದ ಶುಕ್ರವಾರದವರೆಗೆ | 9–30 ರಿಂದ 1–00 | 2–00 ರಿಂದ 6–00 |
| ಶನಿವಾರ | 9–30 ರಿಂದ 1–00 | ರಜಾ |
| ಭಾನುವಾರ | ವಾರದ ರಜಾ ದಿನ | |

**ನಿರ್ದೇಶಕರುಗಳು**

ಶ್ರೀ ಕೆ. ಭಗವಾನ್‌ದಾಸ್ ರೈ
ಶ್ರೀ ಡಿ. ಚಂದ್ರಹಾಸ್ ರೈ
ಶ್ರೀ ಟಿ. ಎನ್. ಶಿವಾನಂದ ಶೆಟ್ಟಿ
ಶ್ರೀಮತಿ ಸರ್ವಾಣಿ ಜಿ. ರೈ
ಶ್ರೀ ಬಿ. ಸಂತೋಷ್ ಕುಮಾರ್ ಶೆಟ್ಟಿ
ಶ್ರೀ ಕೆ. ಪ್ರಮೋದ್‌ಚಂದ್ರ ಭಂಡಾರಿ
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ

ಕಾರ್ಯದರ್ಶಿ – ಶ್ರೀ ಕೆ. ಆರ್. ಶೇಷಾದ್ರಿ

**ಸ್ಥಾಪಕ ಅಧ್ಯಕ್ಷರು : ದಿ. ಡಾ॥ ಐ. ವಿ. ಶೆಟ್ಟಿ**

**ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ**
**ಅಧ್ಯಕ್ಷರು**

**ಶ್ರೀ ಹೆಚ್. ಶ್ರೀಧರ್ ಹೆಗ್ಡೆ**
**ಉಪಾಧ್ಯಕ್ಷರು**

ADVT.

# Kirthi Palmville

ULTRA LUXURY 2 & 3 BHK RESIDENTIAL APARTMENT

## A SMART CHOICE

Shiribeedu
**UDUPI**




SWIMMING POOL | CLUBHOUSE | WALKING TRACK | INDOOR GYM | KIDS PLAY ZONE

*Live in Exotic Style*

Project Promoted by

**Kirthi CONSTRUCTION**

**SAMPLE FLAT READY**
Call for an appointment
99452 71353 | 81971 40844

www.kirthiconstruction.com

ADVT.

3rd Floor, Maithri Complex, Udupi - 576101 | Tele: +91 820 2530655 | email: enquiry@kirthiconstruction.com

REGISTERED KA/BGW-1589/2021-2023 RNI NO : KARBIL/2005/16402, Date of Publication 07-01-2024.
Licenced post without prepayment License No. PMG BG /WPP-219/2021-2023, Total No. of Pages 24+4=28
Licensed to post at Bengaluru PSO, Mysore Road, Bengaluru - 560026, on 10th or 12th of every Month




Printed and Published by : Sri Anandram Shetty B. on behalf of Bunts' Sangha Bangalore.
# 324, Bunts' Sangha Complex, Chord Road, Vijayanagar, Bengaluru - 560040. Editor : Aravind Shetty M.
Printed at Poornima Printers, # 3 & 4, Sy. No. 51 / 14, Chowdeshwarinagar, Pipe Line Road, Laggere,
Bengaluru - 560 058. Phone : 080 - 23359588 | 23351210.